ನಂ: ಎಎಲ್‌ಎನ್: ಸಿಆರ್: 219: 2000-2001

ಜಿಲ್ಲಾಧಿಕಾರಿಯವರ ಕಾರ್ಯಾಲಯ,
ಹಾಸನ ಜಿಲ್ಲೆ - ಹಾಸನ
ದಿನಾಂಕ: 22-8-2000.

## : ಸುತ್ತೋಲೆ :

ವಿಷಯ:- ರಾಷ್ಟ್ರೀಯ : ರಾಜ್ಯ ಹೆದ್ದಾರಿಗಳ ಇಕ್ಕೆಲಗಳ ಕೃಷಿ ಜಮೀನುಗಳ ಅನ್ಯಸಂಕ್ರಮಣದ ಬಗ್ಗೆ.

ಉಲ್ಲೇಖ:-1) ಸರ್ಕಾರದ ಪ್ರಕಟಣೆ ನಂ: ಆರ್‌ಡಿ: 10: ಎಲ್‌ಜಿಪಿ: 91 ದಿನಾಂಕ: 29-4-1991.

2) ಸರ್ಕಾರದ ಸುತ್ತೋಲೆ ನಂ: ಆರ್‌ಡಿ:7 ಎಲ್‌ಜಿಪಿ: 95 ದಿನಾಂಕ: 07-6-1999.

---

ಉಲ್ಲೇಖ (1)ರ ಸರ್ಕಾರದ ಪ್ರಕಟಣೆಯನ್ವಯ, ರಾಷ್ಟ್ರೀಯ ಹೆದ್ದಾರಿಗಳ ಇಕ್ಕೆಲಗಳ 3.2 ಕಿ.ಮೀ ವ್ಯಾಪ್ತಿಯ 50 ಸಾವಿರ ಜನಸಂಖ್ಯೆ ಮೀರಿದ ನಗರ : ಪುರಸಭಾ ವ್ಯಾಪ್ತಿಯಲ್ಲಿನ ಗ್ರಾಮಗಳ ಹಾಗೂ ನಗರಸಭೆ: ಪುರಸಭೆಗಳ ಎಲ್ಲೆಗಳಿಂದ 8 ಕಿ.ಮೀ ವ್ಯಾಪ್ತಿಯಲ್ಲಿ ಬರುವ ಗ್ರಾಮಗಳ ಕೃಷಿ ಜಮೀನುಗಳ ಅನ್ಯಸಂಕ್ರಮಣ ಮಂಜೂರಿ ಅಧಿಕಾರ ಜಿಲ್ಲಾಧಿಕಾರಿಗಳಿದೆ.

2) ಉಲ್ಲೇಖ (2)ರ ಸುತ್ತೋಲೆಯಲ್ಲಿ ಸರ್ಕಾರವು, ಸರ್ಕಾರದ ಆದೇಶ ಸಂಖ್ಯೆ: ಪಿಡಬ್ಲ್ಯೂಡಿ: 7556-665- ಆರ್ ಮತ್ತು ಬಿ -6-54-5 ಕೇಂದ್ರ ಸರ್ಕಾರದ ಸಾರಿಗೆ ಇಲಾಖೆಯ ಪತ್ರ ನಂ: ಪಿ1: 7(11) 67 ದಿನಾಂಕ: 1-1-1966ರನ್ವಯ ಜಮೀನಿನಲ್ಲಿ ಕಟ್ಟಲು ಉದ್ದೇಶಿಸಿರುವ ಕಟ್ಟಡವು ರಾಷ್ಟ್ರೀಯ ಹಾಗೂ ರಾಜ್ಯ ಹೆದ್ದಾರಿಗಳಿಗೆ ಸಂಬಂಧಿಸಿದಂತೆ ರಸ್ತೆಯ ಮಧ್ಯಭಾಗದಿಂದ 40 ಮೀಟರ್ ಅಂತರವನ್ನು ಮತ್ತು ಜಿಲ್ಲಾ ಹೆದ್ದಾರಿಗೆ ಸಂಬಂಧಿಸಿದಂತೆ, ರಸ್ತೆಯ ಮಧ್ಯಭಾಗದಿಂದ 25 ಮೀಟರ್‌ಗಳ ಅಂತರವನ್ನು ಕಾಯ್ದಿರಿಸಬೇಕಾಗಿದೆ ಹಾಗೂ ಈ ಭಾಗದ ಪ್ರದೇಶದಲ್ಲಿ ಯಾವುದೇ ಕಟ್ಟಡ ವಗೈರೆಗಳನ್ನು ಕಟ್ಟುವಂತಿಲ್ಲ.

3)ಎಕ್ಸಿಕ್ಯೂಟಿವ್ ಇಂಜಿನಿಯರ್, ರಾಷ್ಟ್ರೀಯ ಹೆದ್ದಾರಿ, ಮಂಗಳೂರು ಇವರ ಸುತ್ತೋಲೆ ನಂ: ರಾಹೆ: ಮಂಇ: ಅತಿಕ್ರಮಣ :95-96: 1520 : ದಿನಾಂಕ: 10-7-95 ರನ್ವಯ ರಾಷ್ಟ್ರೀಯ ಹೆದ್ದಾರಿಯ ಇಕ್ಕೆಲಗಳಲ್ಲಿ ರಸ್ತೆ ಮಧ್ಯದಿಂದ 40 ಮೀಟರ್‌ಗಳ ಆಚೆ ಹಾಗೂ 75 ಮೀಟರ್‌ಗಳ ಒಳಗೆ ಬರುವ ಜಮೀನುಗಳಲ್ಲಿ ಯಾವುದೇ ರೀತಿಯ ಕಟ್ಟಡ ವಗೈರೆ ನಿರ್ಮಾಣಗಳಿಗೆ, ಅಭಿವೃದ್ಧಿ ಕಾರ್ಯಗಳಿಗೆ, ರಾಷ್ಟ್ರೀಯ ಹೆದ್ದಾರಿ ಇಲಾಖೆಯ ಪೂರ್ವಾನುಮತಿ ಪಡೆದು ಕೊಳ್ಳುವುದು ಅವಶ್ಯವಾಗಿದೆ.

4) ತಹಶೀಲ್ದಾರರವರು, ಅನ್ಯಸಂಕ್ರಮಣ ಪ್ರಸ್ತಾವನೆ ಕಳುಹಿಸುವ ಮೊದಲು ಅರ್ಜಿದಾರರ ವಸತಿ ಉದ್ದೇಶದ ಜಮೀನಿಗೆ ಸಂಪರ್ಕ ರಸ್ತೆ, ಒಳಚರಂಡಿ, ಶುದ್ಧ ಕುಡಿಯುವ ನೀರು ರಸ್ತೆ ಹಾಗೂ ಬೀದಿ ದೀಪಗಳ ವ್ಯವಸ್ಥೆ ಮಾಡುವ ಬಗ್ಗೆ ಯಾರು ಹೊಣೆ, ಹಾಗೂ ಈ ಕೆಲಸವನ್ನು ಯಾರು ಮಾಡುತ್ತಾರೆ ಎಂಬ ಬಗ್ಗೆ ವಿವರಣೆ ಕಡ್ಡಾಯವಾಗಿ ಪಡೆಯಬೇಕು.

ಮುಂದುವರಿದಿದೆ-2

5) ಅನ್ಯಸಂಕ್ರಮಣ ಕೋ... ರ್ಜಿಗೆ ಸಂಬಂಧಿಸಿದ ಜಮೀನುಗಳು ಸಾರ್ವಜನಿಕ ಉದ್ದೇಶಕ್ಕೆ ಅವಶ್ಯಕವಿದ್ದರೆ, ಅಂ... ಗಳನ್ನು ಕಾಯ್ದಿರಿಸುವುದು ಹಾಗೂ ಈ ಬಗ್ಗೆ ಪ್ರಸ್ತಾವನೆ ಸಲ್ಲಿಸಬಾರದು...

6) ಸಹಾಯಕ ನಿರ್ದೇಶಕರು, ಭೂ ದಾಖಲೆಗಳ ಇಲಾಖೆಯವರಿಂದ ದುರಸ್ತಿಯಾಗಿರದ ಸ.ನಂ: ಹಿಸ್ಸಾ ನಂ:ಗಳ ಬಗ್ಗೆ ಅನ್ಯಸಂಕ್ರಮಣಕ್ಕೆ ಪ್ರಸ್ತಾವನೆಗಳು ಬರುತ್ತಿವೆ. ಸದರಿ ಸ.ನಂ: ಹಿಸ್ಸಾ ನಂ.ಗಳು ದುರಸ್ತಿಯಾದ ಬಗ್ಗೆ ಸಂಬಂಧಿಸಿದ ಸಹಾಯಕ ನಿರ್ದೇಶಕರು ಭೂದಾಖಲೆಗಳವರಿಂದ ದೃಢೀಕರಣ ಪತ್ರ ಪಡೆದು ಅರ್ಜಿಯೊಡನೆ ಲಗತ್ತಿಸುವಂತೆ ಅರ್ಜಿದಾರರಿಗೆ ಸೂಕ್ತ ತಿಳುವಳಿಕೆ ನೀಡುವುದು.

ಮೇಲಿನ ನಿರ್ದೇಶನಗಳನ್ನು ತಪ್ಪದೆ ಅನುಸರಿಸುವಂತೆ ಸೂಚಿಸಿದೆ.

ಸಹಿ-:
( ಜಿ.ಪಿ.ಕನಿರಾಂ )
ಜಿಲ್ಲಾಧಿಕಾರಿಗಳು
ಹಾಸನ ಜಿಲ್ಲೆ- ಹಾಸನ.

ಪ್ರತಿಯನ್ನು ಸೂಕ್ತ ಕ್ರಮಕ್ಕಾಗಿ :-

1) ಎಲ್ಲಾ ತಹಶೀಲ್ದಾರರುಗಳಿಗೆ.
2) ಉಪ ವಿಭಾಗಾಧಿಕಾರಿಗಳು, ಹಾಸನ ಮತ್ತು ಸಕಲೇಶಪುರ ರವರಿಗೆ.

ಜಿಲ್ಲಾಧಿಕಾರಿಯವರ ಪರವಾಗಿ,
ಹಾಸನಜಿಲ್ಲೆ-ಹಾಸನ.
22/8/2000

1) ಉಪತಹಶೀಲ್ದಾರ್ ನಾಡಕಛೇರಿ ನುಗ್ಗೇಹಳ್ಳಿ
2) ಉಪತಹಶೀಲ್ದಾರ್ ನಾಡಕಛೇರಿ ಶ್ರವಣಬೆಳಗೊಳ
3) ರಾಜಸ್ವನಿರೀಕ್ಷಕರು ಉದಯಪುರ
4) 〃 ಕಸಬಾ
5) 〃 ದಂಡಿಗನಹಳ್ಳಿ
6) 〃 ಬಾಗೂರು.

26/8